ಕರ್ನಾಟಕ ಸರ್ಕಾರ

ಸಂ:ಆಇ 37 ಟಿಎಆರ್ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ: 26.7.2021

## ಸುತ್ತೋಲೆ

ವಿಷಯ:- ಸರ್ಕಾರದ ಎಲ್ಲಾ ಫಲಾನುಭವಿ ಆಧಾರಿತ ಯೋಜನೆಗಳ ಕರ್ನಾಟಕ ಸರ್ಕಾರದ ಏಕೀಕೃತ ನೇರ ನಗದು ವರ್ಗಾವಣೆ ವೇದಿಕೆ ಮೂಲಕ ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ:- 1. ಸರ್ಕಾರದ ಆದೇಶ ಸಂಖ್ಯೆ: FD 06 CAM 2013 ದಿನಾಂಕ: 23.11.2016

2. ಸರ್ಕಾರದ ಆದೇಶ ಸಂಖ್ಯೆ: DPAR 02 PRJ 2018 ದಿನಾಂಕ: 13.08.2018.
3. ಸುತ್ತೋಲೆ ಸಂಖ್ಯೆ: FD 25 TAR 2019 ದಿನಾಂಕ: 27.08.2019.
4. ಸುತ್ತೋಲೆ ಸಂಖ್ಯೆ: FD 29 TAR 2019 ದಿನಾಂಕ: 19.11.2020.
5. ಪತ್ರ ಸಂಖ್ಯೆ: CEG-27047/6/2021 ದಿನಾಂಕ: 30.04.2021.
6. ಪತ್ರ ಸಂಖ್ಯೆ: CEG-27047/6/2021 ದಿನಾಂಕ: 15.07.2021

*********

ರಾಜ್ಯ ಸರ್ಕಾರವು ಉಲ್ಲೇಖಿತ (1) ರ ಸರ್ಕಾರದ ಆದೇಶದನ್ವಯ ಫಲಾನುಭವಿ ಆಧಾರಿತ ಯೋಜನೆಗಳಡಿ ಒದಗಿಸಲಾಗುವ ಸೌಲಭ್ಯಗಳನ್ನು ನೇರ ನಗದು ವರ್ಗಾವಣೆ ವೇದಿಕೆ ಬಳಸಿ Aadhaar Based Payment ಮೂಲಕ ಪಾವತಿಸಲು ಆದೇಶಿಸಲಾಗಿದೆ. ಉಲ್ಲೇಖಿತ (2)ರ ಸರ್ಕಾರದ ಆದೇಶದನ್ವಯ ಕರ್ನಾಟಕ ಸರ್ಕಾರದ ಏಕೀಕೃತ ನೇರ ನಗದು ವರ್ಗಾವಣೆ ವೇದಿಕೆ ಅಭಿವೃದ್ಧಿಪಡಿಸಿ ಎಲ್ಲಾ ಇಲಾಖೆಗಳ ಯೋಜನೆಗಳನ್ನು ಇದರ ಮೂಲಕ ಅನುಷ್ಠಾನಗೊಳಿಸಲು ಆದೇಶಿಸಲಾಗಿದೆ. ಆರ್ಥಿಕ ಇಲಾಖೆಯು ಉಲ್ಲೇಖಿತ (3) ಮತ್ತು (4)ರ ಸುತ್ತೋಲೆಗಳನ್ವಯ ಡಿ.ಬಿ.ಟಿ ವೇದಿಕೆಯ ಬಳಕೆಯ ಕುರಿತು ಮಾರ್ಗಸೂಚಿಯನ್ನು ನೀಡಲಾಗಿದೆ.

2021-22 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 312 ರಲ್ಲಿ ಈ ಕೆಳಕಂಡಂತೆ ಘೋಷಿಸಲಾಗಿದೆ.

"ಪ್ರಸ್ತುತ, ಸರ್ಕಾರದ 90 ಯೋಜನೆಗಳಡಿ ಫಲಾನುಭವಿಗಳಿಗೆ ಆರ್ಥಿಕ ನೆರವನ್ನು ಆಧಾರ್ ಪಾವತಿಯ ಡಿಬಿಟಿ ಪ್ಲಾಟ್ ಫಾರ್ಮ್‌ರಡಿ ಪಾವತಿ ಮಾಡಲಾಗುತ್ತಿದೆ. ಸೌಲಭ್ಯ ವಿತರಣೆಯಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಎಲ್ಲಾ ಯೋಜನೆಗಳಿಗೂ ಡಿಬಿಟಿ ವೇದಿಕೆಯಡಿ ಪಾವತಿ ಮಾಡಲು ಕ್ರಮ ವಹಿಸಲಾಗುವುದು."

ಮೇಲಿನ ಆಯವ್ಯಯ ಭಾಷಣದ ಕಂಡಿಕೆಯಂತೆ ಕ್ರಮವಹಿಸುವ ಸಲುವಾಗಿ ಉಲ್ಲೇಖಿತ (5) ರ ಪತ್ರದಲ್ಲಿ ಇಲಾಖೆಗಳು ಅನುಷ್ಠಾನಗೊಳಿಸುತ್ತಿರುವ ಫಲಾನುಭವಿ ಆಧಾರಿತ ಯೋಜನೆಗಳನ್ನು ಕರ್ನಾಟಕ ಸರ್ಕಾರದ ಏಕೀಕೃತ ನೇರ ನಗದು ವರ್ಗಾವಣೆ ವೇದಿಕೆ ಮೂಲಕ ಅನುಷ್ಠಾನಗೊಳಿಸಲು ಕಾರ್ಯವಿಧಾನವನ್ನು ರೂಪಿಸಿ ಮತ್ತು ಈ ಕಾರ್ಯವಿಧಾನವನ್ನು ಅನುಷ್ಠಾನಗೊಳಿಸಲು ಸಮಯಸೂಚಿಯನ್ನು ನಿಗದಿಪಡಿಸುವಂತೆ ಎಲ್ಲಾ ಇಲಾಖಾ

ಕಾರ್ಯದರ್ಶಿಗಳಿಗೆ ಸೂಚನೆ ನೀಡಲಾಗಿತ್ತು. ಒಂದೆರಡು ಇಲಾಖೆಗಳನ್ನು ಹೊರತುಪಡಿಸಿ ಯಾವುದೆ ಇಲಾಖೆಗಳು ಈ ಪತ್ರದ ಮೇಲೆ ಯಾವುದೇ ರೀತಿ ಕ್ರಮವಹಿಸಿರುವ ಬಗ್ಗೆ ಸಿ.ಆ.ಸು (ಇ-ಆಡಳಿತ) ಇಲಾಖೆಗೆ ತಿಳಿಸಿರುವುದಿಲ್ಲ. ಆದುದರಿಂದ ಆಯವ್ಯಯ ಭಾಷಣ ಕಂಡಿಕೆ 312 ರ ಅನುಸರಣೆಗಾಗಿ ಸರ್ಕಾರವು ಈ ಕೆಳಕಂಡಂತೆ ತೀರ್ಮಾನತೆಗೆದುಕೊಂಡಿದೆ.

"ಎಲ್ಲಾ ಇಲಾಖೆಗಳು ಅನುಷ್ಠಾನಗೊಳಿಸುತ್ತಿರುವ ಫಲಾನುಭವಿ ಆಧಾರಿತ ಯೋಜನೆಗಳಿಗೆ ಸಂಬಂಧಿಸಿದಂತೆ ಸಿ.ಆ.ಸು (ಇ-ಆಡಳಿತ) ಇಲಾಖೆಯೊಂದಿಗೆ ಸರ್ಕಾರದ ಏಕೀಕೃತ ನೇರ ನಗದು ವರ್ಗಾವಣೆ ವೇದಿಕೆ ಮೂಲಕ ಅನುಷ್ಠಾನಗೊಳಿಸಲು ಕಾರ್ಯವಿಧಾನವನ್ನು ರೂಪಿಸಿ ಮತ್ತು ಈ ಕಾರ್ಯವಿಧಾನವನ್ನು ಅನುಷ್ಠಾನಗೊಳಿಸಲು ಸಮಯಸೂಚಿಯನ್ನು ನಿಗಧಿಪಡಿಸುವವರೆಗೆ ಈ ಯೋಜನೆಗಳಿಗೆ ಸಂಬಂಧಿಸಿದಂತೆ ಖಜಾನೆಯಲ್ಲಿ ಸಲ್ಲಿಸುವ ಬಿಲ್ಲುಗಳನ್ನು ದಿನಾಂಕ: 01.09.2021 ರಿಂದ ಅಂಗೀಕರಿಸಲಾಗುವುದಿಲ್ಲ. ಸಿ.ಆ.ಸು (ಇ-ಆಡಳಿತ) ಇಲಾಖೆಯಿಂದ ಪ್ರತಿ ಯೋಜನೆಗೆ ಸಂಬಂಧಿಸಿದಂತೆ ವರದಿ ಸ್ವೀಕೃತವಾದ ನಂತರ ಬಿಲ್ಲುಗಳನ್ನು ಮಾತ್ರ ಖಜಾನೆಯಲ್ಲಿ ಅಂಗೀಕರಿಸಲಾಗುವುದು."

ಆದುದರಿಂದ, ಎಲ್ಲಾ ಇಲಾಖಾ ಕಾರ್ಯದರ್ಶಿಗಳು ತಮ್ಮ ಅಧೀನದಲ್ಲಿ ಬರುವ ಕ್ಷೇತ್ರ ಇಲಾಖೆ / ನಿಗಮ / ಮಂಡಳಿ / ಸೊಸೈಟಿಗಳಿಗೆ ತಾವು ಅನುಷ್ಠಾನಗೊಳಿಸುತ್ತಿರುವ ಫಲಾನುಭವಿ ಆಧಾರಿತ ಯೋಜನೆಗಳಿಗೆ ಸಂಬಂಧಿಸಿದಂತೆ ಸಿ.ಆ.ಸು (ಇ-ಆಡಳಿತ) ಇಲಾಖೆಯೊಂದಿಗೆ ಸರ್ಕಾರದ ಏಕೀಕೃತ ನೇರ ನಗದು ವರ್ಗಾವಣೆ ವೇದಿಕೆ (DBT Platform) ಮೂಲಕ ಅನುಷ್ಠಾನಗೊಳಿಸಲು ಕಾರ್ಯವಿಧಾನವನ್ನು ರೂಪಿಸಿ ಮತ್ತು ಈ ಕಾರ್ಯವಿಧಾನವನ್ನು ಅನುಷ್ಠಾನಗೊಳಿಸಲು ಸಮಯಸೂಚಿಯನ್ನು ನಿಗಧಿಪಡಿಸಲು ನಿರ್ದೇಶನ ನೀಡುವಂತೆ ಸೂಚಿಸಲಾಗಿದೆ.

ಒಂದು ವೇಳೆ ಯಾವುದಾದರು ಇಲಾಖೆಯು ದಿನಾಂಕ: 01.09.2021 ರೊಳಗೆ ಕಾರ್ಯವಿಧಾನ ಮತ್ತು ಸಮಯಸೂಚಿಯನ್ನು ನಿಗಧಿಪಡಿಸಿ, ಅದರ ವರದಿಯು ಸಿ.ಆ.ಸು (ಇ-ಆಡಳಿತ) ಇಲಾಖೆಯಿಂದ ಖಜಾನೆಯಲ್ಲಿ ಸ್ವೀಕೃತವಾಗದಿದ್ದಲ್ಲಿ ಅಂತಹ ಇಲಾಖೆಗಳ ಬಿಲ್ಲುಗಳನ್ನು ಖಜಾನೆಯಲ್ಲಿ ಅಂಗೀಕರಿಸದೆ ಇರುವುದಕ್ಕೆ ಇಲಾಖೆಯೇ ಹೊಣೆಯಾಗಿರುತ್ತದೆ ಎಂಬುದನ್ನು ಈ ಮೂಲಕ ತಿಳಿಸಲಾಗಿದೆ.

(ಐ.ಎಸ್.ಎನ್. ಪ್ರಸಾದ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಆರ್ಥಿಕ ಇಲಾಖೆ.

ಪ್ರತಿಗಳು:-

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369 ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-2), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಇ-ಆಡಳಿತ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

5. ಸರ್ಕಾರದ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು
6. ಖಜಾನೆ ಆಯುಕ್ತರು, 6ನೇ ಮಹಡಿ, ಕೆ.ಪಿ.ಸಿ.ಎಲ್., ಗ್ರೀನ್ ಕಟ್ಟಡ, ಔಷಧ ನಿಯಂತ್ರಣ ಆವರಣ, ಬೆಂಗಳೂರು-560001.
7. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
8. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು.
9. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು – ಖಜಾನೆ ಆಯುಕ್ತರ ಮುಖಾಂತರ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.